ಕಾಣುತ್ತಿದ್ದರು. ಆಗಲೂ ಹಾಗೆ. ತಾರುಣ್ಯದಲ್ಲೂ ಒಂದು ಬಗೆಯ ಗಾಂಭೀರ್ಯ. ಹೀಗಾಗಿ ಮಾತನಾಡಲು ಹಿಂಜರಿದೆ. ನಂತರ ನಾನು ಧಾರವಾಡದಲ್ಲಿ ಓದುತ್ತಿದ್ದಾಗ ಮನೋಹರ ಗ್ರಂಥ ಮಾಲೆಯ ಅಟ್ಟದ ಕುರಿತು ಕೇಳಿದ್ದರಿಂದ ಒಂದು ಸಲ ಕಾರ್ನಾಡರು ಊರಲ್ಲಿದ್ದಾರೆ ಅಂತ ಬಾತ್ಮಿ ಸಿಕ್ಕಿ ಅಳುಕಿನಿಂದಲೇ ಮೆಟ್ಟಲು ಹತ್ತಿ ಹೋಗಿದ್ದೆ. ಕಾರ್ನಾಡರು ಇರಲಿಲ್ಲ. ಜಿ.ಬಿ. ಜೋಶಿಯವರು ಅಡಕತ್ತರಿಯಿಂದ ನಾಜೂಕಾಗಿ ಅಡಿಕೆ ಕತ್ತರಿಸಿ ಪುಟ್ಟ ಡಬ್ಬಿಯಲ್ಲಿ ಹಾಕುತ್ತಾ ಇದ್ದರು. ಹಠಾತ್ತನೆ ಗಹಗಹಿಸಿ ನಗುತ್ತ ಕೀರ್ತಿನಾಥ ಕುರ್ತಕೋಟಿ ಮತ್ತು ಗಿರೀಶ ಒಳ ನುಗ್ಗಿದರು. ವಿದ್ಯುತ್ ಬಂದಂತಾಗಿಹೋಯಿತು. ಅವರ ಬೆನ್ನಿಗೆ ಇನ್ನೂ ಮೂರುನಾಲ್ಕು ಜನ ಬಂದರು. ನಾನು ನನ್ನ ಪರಿಚಯ ಮಾಡಿಕೊಂಡು ಅಲ್ಲಿಂದ ಜಾರಿದೆ. ನಂತರ ಮುಂಬಯಿಯಲ್ಲಿ ಬಿ.ವಿ. ಕಾರಂತರ ನಾಟಕೋತ್ಸವದಲ್ಲಿ ಅವರು ಪಾತ್ರಧಾರಿಯಾಗಿ ಬಂದಿದ್ದರು. ಆಗಲೂ ಭಯ. ಹಿಂದೆಯೇ ಉಳಿದೆ. 'ಭಯ ಭಕ್ತಿ'ಗಳು ಇದ್ದರೆ ಆಗಲಿಲ್ಲ, ಅವುಗಳ ಪರ್ಸೆಂಟೇಜು ಸರಿ ಇರಬೇಕು. ಅದರಲ್ಲಿ ಯಾವುದೋ ಒಂದು ಜಾಸ್ತಿ ಆಗಿಬಿಟ್ಟರೆ ಮಂಗನಂತೆ ಆಗಿಬಿಡುತ್ತೇವೆ.

'ಸ್ವಾಮಿ', 'ನಿಶಾಂತ', 'ಸುಬಹ' ಮತ್ತು 'ಮಂಥನ್' ಚಿತ್ರದ ಅವರ ಪಾತ್ರಗಳು ಅವರ ವಯೋಸಹಜ ಲವಲವಿಕೆಯನ್ನು ಮರೆಮಾಚುವ ಗಂಭೀರ ಪಾತ್ರಗಳೆಂದೇ ಅನ್ನಿಸುತ್ತಿತ್ತು. 'ಭೂಮಿಕಾ' ಚಿತ್ರದ ಅವರ 'ಚಿತ್ರಕಥೆ' ನನ್ನ ಸಾರ್ವಕಾಲಿಕ ಫೇವರಿಟ್ ಚಿತ್ರಕಥೆಯಾಗಿ ಉಳಿದಿದೆ. ಆತ್ಮಕಥನವೊಂದನ್ನು ಆಧರಿಸಿದ ಪಟಕಥೆಗೊಂದು ಶ್ರೇಷ್ಠ ಮಾದರಿಯಾಗಿ ಅದು ನನಗೆ ಯಾವತ್ತೂ ಪ್ರಿಯ. ಚಿದಾನಂದ ಮೂರ್ತಿ ಅವರ ಶಿಲಾಶಾಸನಗಳ ಸಂಗ್ರಹದಿಂದ ಅವರು 'ಒಂದಾನೊಂದು ಕಾಲದಲ್ಲಿ' ಚಿತ್ರದ ಕಥೆಯನ್ನು ಹೆಕ್ಕಿದ್ದರ ಬಗ್ಗೆ ನನಗೆ ತುಂಬಾ ಅಚ್ಚರಿ. ಇದನ್ನೆಲ್ಲ ಅವರಿಗೆ ಹೇಳಬೇಕೆನ್ನಿಸುತ್ತಿತ್ತು. ಆದರೆ ಅವಕಾಶ ಆಗಲಿಲ್ಲ.

ಕೊನೆಗೂ ನಾನು ಬೆಂಗಳೂರಿಗೆ ಬಂದ ಮೇಲೆ 'ಈಟೀವಿ' ವಾಹಿನಿಗೆ 'ನಮಸ್ಕಾರ' ಅಂತ ವಿಶೇಷ ವ್ಯಕ್ತಿಗಳ ಸಂದರ್ಶನ ಮಾಡುತ್ತಿದ್ದೆ. ಆಗ ಗಿರೀಶರನ್ನು ಸಂದರ್ಶಿಸಿದೆ. ಆಗಲೂ 'ಭಯ ಭಕ್ತಿ'ಗಳ ಪರ್ಸೆಂಟೇಜು ಹೆಚ್ಚುಕಡಿಮೆ ಆಗಿ ತುಂಬ ಅಧೀರನಾಗಿದ್ದೆ. ತುಂಬಾ ಗೆಲುವಾಗಿ ಮಾತನಾಡಿ ನನ್ನನ್ನೂ ಗೆಲುವಾಗಿಸಿದರು. (ತೇಜಸ್ವಿ ಜೊತೆಗೂ ನಾನು ಹೀಗೆಯೇ ಬೆಬೆಬೆ ಆಗಿದ್ದೆ). ಆದರೆ ಹೀಗೆ ಒಡನಾಡಿದಾಗಲೆಲ್ಲ ಗಿರೀಶರ ಅತ್ಯಂತ ವಿಶಿಷ್ಟವಾದ ವಿನೋದ ಪ್ರಜ್ಞೆ ನನಗೆ ಆಪ್ತವಾಗುತ್ತಿತ್ತು. (ಅದನ್ನು ಅವರ ಆತ್ಮಕಥನ 'ಆಡಾಡತ ಆಯುಷ್ಯ'ದಲ್ಲಿ ಅದ್ಭುತವಾಗಿ ಮನಗಾಣಬಹುದು). ಮರಾಠಿಯ ಆಚಾರ್ಯ ಅತ್ರೆ, ಪು.ಲ. ದೇಶಪಾಂಡೆ ಥರದ, ಮನುಜಲೋಕದ ಅಸಲೀ ಒಡನಾಟದಿಂದ ಹೊಮ್ಮಿದ ಜೀವನ್ಮುಖಿ ವಿನೋದ ಅದು. ನನ್ನ ತಂದೆಯಲ್ಲೂ ಇತ್ತು ಅದು. ಆ ಸಂದರ್ಶನದಲ್ಲೇ ಗಿರೀಶ್ ನನ್ನ ತಂದೆಯವರ ಬಗೆಗಿನ ಒಂದು ಧಾರವಾಡ ದಂತಕತೆಯನ್ನು ನನಗೆ ಹೇಳಿದರು. "ಒಮ್ಮೆ ಏನಾಯ್ತು ಅಂದರೆ, ಗೌರೀಶ ಕಾಯ್ಕಿಣಿ ಮೊದಲ ಬಾರಿಗೆ ಧಾರವಾಡಕ್ಕೆ ಬಂದಿದ್ದರಂತೆ. ಧಾರವಾಡ ಬಸ್‌ಸ್ಟಾಂಡಿನಲ್ಲಿ ಇಳಿದು ಅಡ್ಡಾಡುವಾಗ ಸಂತೆಯ ಮಧ್ಯೆ ಟೊಪಿಗೆ ಹಾಕಿಕೊಂಡ ಮಾಸಲು ಧೋತರದ ಇಬ್ಬರು ಮಹನೀಯರು ಬೇಂದ್ರೆ ಕಾವ್ಯದ ಕುರಿತು ಮೈಮರೆತು ಚರ್ಚೆಯಲ್ಲಿ ತೊಡಗಿದ್ದರಂತೆ. ಗೌರೀಶರಿಗೆ ರೋಮಾಂಚನವಾಗಿ ಹೋಯಿತು. ಅವರನ್ನು ಮಾತಾಡಿಸಿ, 'ನೋಡ್ರಿ, ಧಾರವಾಡ ಅಂದರೆ ಕಾವ್ಯದ ಬೀಡು ಅಂತ ಸಾಕಷ್ಟು ಕೇಳಿದ್ದೆ, ಆದರೆ, ಈ ಮಟ್ಟದಲ್ಲಿ ಹೀಗೆ ಸಂತೆ ಮಧ್ಯ ನಾಗರಿಕರು ಕಾವ್ಯ ಚರ್ಚೆ ಮಾಡುವಷ್ಟು ಮುಂದುವರೆದಿದೆ ಅಂತ ಗೊತ್ತಿರಲಿಲ್ರಿ.' ಎಂದು ಕೌತುಕವನ್ನು ವ್ಯಕ್ತಪಡಿಸಿದರಂತೆ. ಆಮ್ಯಾಲ ಗೊತ್ತಾಯ್ತಂತೆ – ಮಾತಾಡ್ತಿದ್ದವರು ಒಬ್ರು ಜಿ.ಬಿ. ಜೋಶಿ ಮತ್ತು ಇನ್ನೊಬ್ರು ಬೇಂದ್ರೆ ಅಂತ!''

ಅವರ ಲೇವಡಿಗಳೆಲ್ಲ ಸ್ವಂತದ ಕುರಿತೇ ಇರುತ್ತಿದ್ದವು. ಒಮ್ಮೆ ಒಂದು ಸ್ನೇಹಕೂಟದಲ್ಲಿ ಏನೋ ದೊಡ್ಡ ಚರ್ಚೆ ನಡೆದಿತ್ತು. ಗಿರೀಶ್ ಸುಮ್ಮನೆ ಆಲಿಸುತ್ತಿದ್ದರು. ಅಲ್ಲೇ ಇದ್ದ ರಂಗಕರ್ಮಿ ಕಪ್ಪಣ್ಣ,